ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp.81-87
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕರ್ನಾಟಕದಲ್ಲಿ ಮೌಢ್ಯಾಚರಣೆಗಳು: ಒಂದು ಅಧ್ಯಯನ

**ತೃಪ್ತಿ ಹೆಚ್. ಪಿ**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***
*ಮೌಢ್ಯಾಚರಣೆಗಳು ಎಂದರೆ ತಾರ್ಕಿಕತೆಯ ಕೊರತೆಯಿಂದ ಅಥವಾ ವಿಜ್ಞಾನಾಧಾರಿತ ದೃಷ್ಟಿಕೋನವನ್ನು ತಿರಸ್ಕರಿಸುವ ಪದ್ಧತಿಗಳು ಮತ್ತು ನಂಬಿಕೆಗಳು. ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಯುಗದವರೆಗೂ, ಮೌಢ್ಯಾಚರಣೆಗಳು ಭಾರತೀಯ ಸಮಾಜದ ವಿಭಿನ್ನ ಭಾಗಗಳಲ್ಲಿ ಬೇರೂರಿವೆ. ಈ ಅಧ್ಯಯನವು ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ಅನುಸರಿಸಲ್ಪಡುವ ಮೌಢ್ಯಾಚರಣೆಗಳನ್ನು ಗುರುತಿಸುವುದರೊಂದಿಗೆ, ಅವುಗಳ ಸಾಮಾಜಿಕ, ಆರ್ಥಿಕ, ಮತ್ತು ಮಾನಸಿಕ ಪರಿಣಾಮಗಳನ್ನು ವಿಶ್ಲೇಷಿಸುತ್ತದೆ. ಮೌಢ್ಯಾಚರಣೆಗಳನ್ನು ಕಡಿಮೆ ಮಾಡುವುದರಲ್ಲಿ ಶಿಕ್ಷಣ, ಜಾಗೃತಿ ಮತ್ತು ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮಗಳ ಪಾತ್ರವೂ ಇಲ್ಲಿವೆ ಎಂಬುದನ್ನು ಈ ಲೇಖನ ಒತ್ತಿ ಹೇಳುತ್ತದೆ.*

***Keywords:*** *ಮೌಢ್ಯಾಚರಣೆ, ಸಾಮಾಜಿಕ ತಾರತಮ್ಯ, ಆರ್ಥಿಕ ಪ್ರಭಾವ, ಶಿಕ್ಷಣದ ಪಾತ್ರ.*

**ಪೀಠಿಕೆ**

ಮೌಢ್ಯಾಚರಣೆಗಳು ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಆಳವಾಗಿ ಬೇರೂರಿರುವ ಸಂಗತಿಗಳಾಗಿವೆ. ಮಾನಸಿಕ ಅಜ್ಞಾನ, ಅಸ್ವಸ್ಥತೆ, ಹಾಗೂ ಧಾರ್ಮಿಕ ನಂಬಿಕೆಗಳ ದೋಷಪರಿಣಾಮ. ಕರ್ನಾಟಕದ ಹಳ್ಳಿಗಳಲ್ಲಿಯೂ, ನಗರ ಪ್ರದೇಶಗಳಲ್ಲಿಯೂ ಇಂತಹ ಆಚರಣೆಗಳು ಸಾಮಾಜಿಕ ಜೀವನದ ಭಾಗವಾಗಿವೆ. ಗಂಡಾಂತರ ನಿವಾರಣೆ, ತೊಂದರೆ ನಿವಾರಣೆ, ಮೌಢ್ಯ ನಿರ್ಣಯವೇ ಈ ಮೌಢ್ಯಾಚರಣೆಗಳ ಮೂಲಭೂತ ಲಕ್ಷಣವಾಗಿದೆ. ಈ ಲೇಖನವು ಇವುಗಳ ಸಮಗ್ರ ಪರಿಶೀಲನೆ ಮತ್ತು ಪರಿಣಾಮಕಾರಿಯಾದ ಪರಿಹಾರಗಳನ್ನು ಶೋಧಿಸುವ ಪ್ರಯತ್ನವಾಗಿದೆ.

ಮಾನವನು ಮೂಲತಃ ಪ್ರಕೃತಿ ಆರಾಧನೆಯಿಂದ ಪ್ರಾರಂಭವಾದ ದೇವರ ಆರಾಧನೆ ಕಂಡ ಕಂಡ ವಸ್ತುಗಳನ್ನು ದೇವರೆಂದು ಭಾವಿಸುವಷ್ಟು ಮೌಢ್ಯಕ್ಕೆ ದಾರಿ ಮಾಡಿಕೊಟ್ಟಿತು. ಈ ನಿಟ್ಟಿನಲ್ಲಿ ಯಾವುದೇ ನಂಬಿಕೆ, ಮೂಢನಂಬಿಕೆಗಳು, ಆಚರಣೆಗಳು ಕೊನೆಗೊಳ್ಳುವುದೇ ಮೂಲತಃ ದೇವರ ವಿಷಯದಲ್ಲಿ. ವೇದ, ಪುರಾಣಗಳಲ್ಲಿನ ಸೌಮ್ಯ ದೇವತೆಗಳು, ಉಗ್ರದೇವತೆಗಳ ಪಂಥ ಮುಗ್ಧ ಮನಸ್ಸನ್ನು ಆವರಿಸಿವೆ. ಹೀಗಾಗಿ ವಿಚಾರವಂತಿಕೆ ಬರುವುದೇ ಇಲ್ಲ. ಮಾನವನಾಗಿ ಹುಟ್ಟಿದ ಮೇಲೆ ಆತನ ಬದುಕಿಗೆ ಆಚಾರ–ವಿಚಾರದೊಂದಿಗೆ, ನಂಬಿಕೆ, ಸಂಪ್ರದಾಯಗಳು ಅಗತ್ಯ. ಆದರೆ ಅವುಗಳಲ್ಲಿ ಸತ್ಯತೆ ಇರಬೇಕು. ಯಾವುದೇ ವಿಷಯವನ್ನು ಮಾನವ ಸಕಾರಾತ್ಮಕ ಚಿಂತನೆಗೆ ಒಳಪಡಿಸುವ, ಯೋಚಿಸುವ, ವಿಮರ್ಶಿಸುವ ಮನಸ್ಸನ್ನು ಹೊಂದಬೇಕು. ಗುರು ಹಿರಿಯರನ್ನು ಗೌರವಿಸುವುದು, ವಿನಮ್ರಭಾವ,

***Please cite this article as:*** ತೃಪ್ತಿ ಹೆಚ್.ಪಿ (2024). ಕರ್ನಾಟಕದಲ್ಲಿ ಮೌಢ್ಯಾಚರಣೆಗಳು: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(4), 81–87

ದೇವರ ಬಗ್ಗೆ ನಂಬಿಕೆಯಿಂದಿರುವುದು, ಮಾಡುವ ಕೆಲಸದಲ್ಲಿ ಶ್ರದ್ಧೆ, ಸಹಕಾರ ಮನೋಭಾವ ಇತ್ಯಾದಿಗಳು ನಂಬಿಕೆಯ ಮೂಲವಾಗಿವೆ. ಇದಲ್ಲದೆ ಪ್ರಾಣಿಬಲಿ, ಮಾಟಮಂತ್ರ, ಬೆತ್ತಲೆ ಸೇವೆ, ದೇವದಾಸಿ ಪದ್ಧತಿ, ಸಿಡಿಯಾಚರಣೆ, ಗಾವು ಸಿಗಿಯುವುದು, ಋತುಮತಿಯಾದವರನ್ನು ಊರ ಹೊರಗಿರಿಸುವುದು, ದೆವ್ವ-ಭೂತ, ಮೈಮೇಲೆ ದೇವರು ಬರುವುದು ಮುಂತಾದ ಆಚರಣೆಗಳು ಮೌಢ್ಯಾಚಾರಣೆಗಳಾಗಿದ್ದು ಮತ್ತು ಅಮಾನವೀಯವಾದವುಗಳಾಗಿವೆ. ಇವುಗಳು ದೈಹಿಕ ಮತ್ತು ಮಾನಸಿಕ ಹಿಂಸೆಯ ಆಚರಣೆಗಳೇ ಆಗಿವೆ. ಆದರೂ ಮಾನವ ಇವುಗಳನ್ನು ಬಿಡಲು ಸಿದ್ದವಿಲ್ಲ. ಈ ಮನಸ್ಥಿತಿಯನ್ನೇ ಮೌಢ್ಯವೆಂದೂ ಇವುಗಳ ಆಚರಣೆಯನ್ನೇ ಮೌಢ್ಯಾಚರಣೆಗಳು ಎಂದು ಕರೆಯುತ್ತಾರೆ. ಅರ್ಥವಿಲ್ಲದ, ನೈಜವಲ್ಲದ ಆಚರಣೆಗಳನ್ನು ಒಪ್ಪಿ ಪಾಲಿಸುವುದೇ ಮೌಢ್ಯಾಚರಣೆಯಾಗಿದೆ. ಇದು ಮಾನವನ ಅಜ್ಞಾನವನ್ನು, ಅಂಧಕಾರವನ್ನು ತೋರ್ಪಡಿಸುವುದು. ವ್ಯಕ್ತಿಗತ ಆಚರಣೆ, ನಂಬಿಕೆಗಳು ಸಮಾಜದ ಮೇಲೆ ಬೀರುವ ಪರಿಣಾಮ ಕಡಿಮೆ. ಇದಲ್ಲದೆ ಸಾಮೂಹಿಕ ಮೂಢನಂಬಿಕೆಗಳು ಬೀರುವ ಪ್ರಭಾವ ತೀವ್ರತರಹದವುಗಳಾಗಿರುತ್ತವೆ. ಹೀಗಾಗಿ ಪ್ರತಿಯೊಂದು ಆಚರಣೆಯೂ ಸರಿ ತಪ್ಪುಗಳ ವಿಮರ್ಶೆಗೆ ಒಳಗಾಗಬೇಕು. ದೇವರು ನಿರಾಕಾರ, ಸರ್ವಶಕ್ತ. ಈ ನೈಜ ಅರಿವನ್ನು ಮನದಲ್ಲಿ ಸದಾ ಜಾಗೃತವಾಗಿ ಕಾಯ್ದುಕೊಂಡರೆ ಯಾವುದೇ ಮೌಢ್ಯಕ್ಕೂ ಜಾಗವಿರುವುದಿಲ್ಲ. ಎಲ್ಲಾ ಆಚರಣೆ ನಂಬಿಕೆಗಳನ್ನು ಮೌಢ್ಯವೆನ್ನಲು ಆಗದು. ಮಾನವನ ಬದುಕಿಗೆ ಮಾರಕವಾದ ಆಚರಣೆಗಳು, ನಂಬಿಕೆಗಳೇ ಮೌಢ್ಯಗಳಾಗಿರುತ್ತವೆ.

**ದೇವದಾಸಿ ಪದ್ಧತಿ**

ಕರ್ನಾಟಕದಲ್ಲಿ ಐತಿಹಾಸಿಕ ಕಾಲಘಟ್ಟದಿಂದಲೂ ಆಚರಣೆಯಲ್ಲಿರುವ ಪ್ರಮುಖವಾದ ಮೌಢ್ಯಾಚರಣೆಗಳಲ್ಲಿ ದೇವದಾಸಿ ಪದ್ಧತಿಯೂ ಒಂದಾಗಿದೆ. ದೇವದಾಸಿ ಪದ್ಧತಿಯು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡು ಬರುವ ಒಂದು ಮೌಢ್ಯ ಆಚರಣೆಯಾಗಿದೆ. ಅಂತಹ ಶೋಷಣೆಗಳಲ್ಲಿ ದೇವದಾಸಿ ಪದ್ಧತಿಯು ಒಂದಾಗಿದೆ. ದೇವರ ಆರಾಧನೆಯ ಹೆಸರಿನಲ್ಲಿ ನೃತ್ಯ-ಸಂಗೀತಗಳ ವ್ಯಾಪಕ ಬಳಕೆಯಿಂದ ದೇವದಾಸಿ ಪದ್ಧತಿಯು ಆರಂಭವಾಗಿರುವುದು ಕಂಡುಬರುತ್ತದೆ. ಸ್ತ್ರೀಯರನ್ನು ದೇವರ ಸೇವೆಗೆಂದು ಧರ್ಮದ ಹೆಸರಿನಲ್ಲಿ ನೃತ್ಯಗಾರ್ತಿಯರನ್ನಾಗಿ ಹಾಗೂ ದೇವದಾಸಿಯರನ್ನಾಗಿ ಮುಡಿಪಿಡುವ ಪದ್ಧತಿ ಆರಂಭದಲ್ಲಿ ದೈವ ಭಕ್ತಿ ಮತ್ತು ಧರ್ಮ ಶ್ರದ್ಧೆಯಿಂದ ಕೂಡಿದ್ದು, ನಂತರದ ಕಾಲಘಟ್ಟದಲ್ಲಿ ಇದರ ಉದ್ದೇಶವೇ ಬದಲಾಗಿರುವುದು ಕಂಡುಬರುತ್ತದೆ.

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರನ್ನು ಮೂಢನಂಬಿಕೆಯ ಮೌಢ್ಯಾಚಾರಣೆಯ ಮೂಲಕ ಶೋಷಣೆಯನ್ನು ಮಾಡುತ್ತಿರುವುದು ಸಾಮಾಜಿಕ ಪದ್ಧತಿಯಾಗಿದೆ. ಕರ್ನಾಟಕದ ದೇವಾಲಯಗಳಲ್ಲಿ ಪೂಜಾರಿಯ ಸ್ಥಾನ ಮೊದಲನೆಯದಾಗಿದ್ದರೆ, ದೇವದಾಸಿಯರೇ 2ನೇ ಸ್ಥಾನದಲ್ಲಿ ಕಂಡು ಬರುತ್ತಾರೆ ಎಂದು ದುಬಾಯಿಸ್‌ರವರು ತಮ್ಮ 'ಹಿಂದೂ ಮ್ಯಾನರ್ಸ್, ಕಸ್ಟಮ್ ಅಂಡ್ ಸೆರಮನಿ' ಎಂಬ ಕೃತಿಯಲ್ಲಿ ಹೇಳಿದ್ದಾರೆ. ದೇವರಿಗೆ ಹೋರಿ ಬಿಟ್ಟರೆ 'ಬಸವ' ಎನ್ನುವಂತೆ, ಮಣಕವನ್ನು ಬಿಟ್ಟರೆ 'ಬಸವಿ' ಎನ್ನುವರು. ಇದರಂತೆ ಪ್ರಾಚೀನ ಕಾಲದಲ್ಲಿ ದೇವಸ್ಥಾನಗಳನ್ನು ಗುಡಿಸಿ ಸ್ವಚ್ಛವಾಗಿಟ್ಟುಕೊಂಡಿರಲು ಹೆಣ್ಣನ್ನು ಮುಡುಪಾಗಿಟ್ಟದ್ದೆ ಬಸವಿ ಪದ್ಧತಿಗೆ/ ದೇವದಾಸಿ ಪದ್ಧತಿಗೆ ಪೀಠಿಕೆಯಾಯಿತು. ಕರ್ನಾಟಕದಲ್ಲಿ 'ಬಸವಿ' ಎಂಬ ಪದ ಬಳಕೆಯಲ್ಲಿದ್ದು, ಮುಂದೆ ಸಂಸ್ಕೃತದಿಂದ ಪ್ರಭಾವ ಈ ಶಬ್ಧಕ್ಕೆ ಪರ್ಯಾಯವಾಗಿ 'ದೇವದಾಸಿ' ಶಬ್ಧವನ್ನು ಬಳಸತೊಡಗಿದರು. ದೇವದಾಸಿ ಪದ ಸಂಸ್ಕೃತದಿಂದ ಬಂದಿದೆ. ದ್ರಾವಿಡರ ಮಾತೃ ಪ್ರಧಾನ ಕುಟುಂಬದಲ್ಲಿ ಬಸವಿ ಪದ್ಧತಿ ಹುಟ್ಟಿಕೊಂಡಿತು. ನಂತರ ಕಾಲಘಟ್ಟದಲ್ಲಿ, ಆರ್ಯರು ಬಂದು ದ್ರಾವಿಡರನ್ನು ಸೋಲಿಸಿದರು. ಆದ್ದರಿಂದ ಸಮ್ಮಿಶ್ರ ಸಂಸ್ಕೃತಿಯಲ್ಲಿ

ಬಸವಿ ದೇವದಾಸಿಯಾದಳು. ಆರ್ಯರ ದೇವದಾಸಿಗೂ ದ್ರಾವಿಡರ ಮಾತೃದೇವತೆಗೂ ಸಂಬಂಧವನ್ನು ಕಲ್ಪಿಸಲಾಯಿತು.

**ಬೆತ್ತಲೆ ಸೇವೆ**

ಕರ್ನಾಟಕದ ಮೌಢ್ಯ ಆಚರಣೆಗಳಲ್ಲಿ ಬೆತ್ತಲೆ ಸೇವೆಯೂ ಸಹ ಪ್ರಮುಖವಾದ ಆಚರಣೆಯಾಗಿದೆ. ಹರಕೆಯ ಒಂದು ಭಾಗವಾಗಿಯೇ ಬೆತ್ತಲೆ ಸೇವೆ ಕಂಡುಬರುತ್ತದೆ. ಇದು ಜಾತ್ರೆಗಳ ಸಂದರ್ಭಗಳಲ್ಲಿ ನಡೆಯುವ ಆಚರಣೆಗಳಲ್ಲೊಂದು. ಕರ್ನಾಟಕದ ಹಲವು ಭಾಗಗಳಲ್ಲಿ ಹಿಂದಿನಿಂದಲೂ ಬೆತ್ತಲೆ ಸೇವೆ ಆಚರಣೆ ನಡೆದು ಬಂದಿದೆ. ದೇವರ ಹೆಸರಿನಲ್ಲಿ ಬೆತ್ತಲೆ ದೇಹವನ್ನು ನೋಡಿ ಆನಂದಿಸುವ ಕಾಮುಕ ಪ್ರವೃತ್ತಿ ಇದಾಗಿದ್ದು, ಮೇಲ್ವರ್ಗಗಳ ಅಪೇಕ್ಷೆಯ ಪರವಾಗಿ ಹುಟ್ಟಿಕೊಂಡಿರಬಹುದು. ಇದನ್ನು ನಿರ್ವಾಣ ಸೇವೆ, ಬೇವಿನುಡುಗೆ ಸೇವೆ, ದಾಂಡುಡಿಗೆ ಸೇವೆ, ಉಟ್ಟುಡುಗೆ ಸೇವೆ ಎಂದೂ ಕರೆಯುತ್ತಾರೆ. ಮಾನವನಲ್ಲಿ ಸಾಮಾಜಿಕ ಅನಿಷ್ಟವನ್ನು ಬೆಳಸುವ ಆಚರಣೆ ಇದಾಗಿದೆ. ಬೆಳಗಾವಿ ಜಿಲ್ಲೆ ಸವದತ್ತಿ ಎಲ್ಲಮ್ಮನ ಜಾತ್ರೆ, ಚಂದ್ರಗುತ್ತಿಯ ಜಾತ್ರೆ ಮೊದಲಾದವು ಈ ಹಿನ್ನೆಲೆಗೆ ನಿದರ್ಶನಗಳಾಗುತ್ತವೆ. ಹಾಗೆಯೇ ಧಾರವಾಡ, ಗುಲ್ಬರ್ಗ, ರಾಯಚೂರು ಜಿಲ್ಲೆ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಸ್ವರೂಪದಲ್ಲಿ ಆಚರಣೆಯಲ್ಲಿರುವುದನ್ನು ಕಾಣಬಹುದು.

**ಸತಿ ಪದ್ಧತಿ**

ಸತಿ ಪದ್ಧತಿಯೆಂದರೆ, ಹೆಂಡತಿಗೆ ಮೊದಲೇ ಗಂಡ ಸತ್ತರೆ, ಗಂಡನ ಜೊತೆಯಲ್ಲಿ ಹೆಂಡತಿಯನ್ನು ಸುಡುವುದು ಅಥವಾ ಹೂಳುವುದು. ಕೆಲವು ಸಲ ಗಂಡನ ಜೊತೆಯಲ್ಲಿ ಆತನ ಆಳು ಕಾಳುಗಳನ್ನು ಹಾಗೂ ಇತರ ಪ್ರೀತಿಪಾತ್ರರನ್ನು ಹೂಳುತ್ತಿದ್ದರು. ಆತನಿಗೆ ಇಷ್ಟವಾದ ವಸ್ತುಗಳನ್ನೂ ಹೂಳುವುದು ಈಜಿಪ್ಟ್ ಸಂಸ್ಕೃತಿಯಲ್ಲಿ. ಈಜಿಪ್ಟಿನ ಅರಸ ಸತ್ತರೆ, ಅರಸನ ಜೊತೆಯಲ್ಲಿ ಆತನ ರಾಣಿಯರನ್ನು, ಸೇವಕರನ್ನು, ಸಾಕು ಪ್ರಾಣಿಗಳನ್ನೂ, ರಾಜನಿಗೆ ಇಷ್ಟವಾದ ವಸ್ತುಗಳನ್ನು ಹೂಳುತ್ತಿದ್ದ ಪದ್ಧತಿ ವಿಶ್ವವಿಖ್ಯಾತವಾದದ್ದು. ಪರಲೋಕದಲ್ಲಿ ರಾಜ ಒಂಟಿಯಾಗಿರಬಾರದು ಎನ್ನುವುದು ಈ ಆಚರಣೆಯ ಉದ್ದೇಶ. ಭಾರತದ ಸತಿ ಪದ್ಧತಿಯ ಮೊದಲ ಉಲ್ಲೇಖ ಮಹಾಭಾರತದಲ್ಲಿ ಬರುತ್ತದೆ. ಪಾಂಡು ಮಹಾರಾಜ ಸತ್ತಾಗ ಆತನ ಜೊತೆಯಲ್ಲಿ ಮಾದ್ರಿ ಸಹಗಮನ ಮಾಡುತ್ತಾಳೆ. ಕುಂತಿ ಮಕ್ಕಳ ರಕ್ಷಣೆಗಾಗಿ ಸತಿಯಾಗುವುದಿಲ್ಲ. ಸತಿ ಪದ್ಧತಿಯನ್ನು ರೂಪಿಸಿದ್ದು ಪುರುಷ ಪ್ರಾಧಾನ ಸಮಾಜ. ಸತಿ ಆಚರಣೆಯ ಮೂಲಕ ಹೆಂಗಸರನ್ನು ಶೋಷಿಸುವುದೇ ಈ ಪದ್ಧತಿಯ ಮೂಲ ಉದ್ದೇಶ.

**ಓಕುಳಿ ಆಚರಣೆ**

ಬೆತ್ತಲ ಸೇವೆಯೆಂತೆ ಕರ್ನಾಟಕದಲ್ಲಿರುವ ಮೌಢ್ಯಾಚಾರಣೆಗಳಲ್ಲಿ ಓಕುಳಿ ಆಚರಣೆಯೂ ಕೂಡ ಒಂದು. ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಓಕುಳಿ ಆಚರಣೆ ರೂಢಿಯಲ್ಲಿದೆ. ಮುದ್ದಾಟನೂರು ಮತ್ತು ಕಲಕುಂಬಿ ಎಂಬ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಹಳ್ಳಿಗಳಲ್ಲಿನ ಹನುಮನ ಮಂದಿರಗಳಲ್ಲಿ ಹೋಳಿ ಹಬ್ಬದಂದು ಊರಿನವರೆಲ್ಲ ಸೇರಿರುತ್ತಾರೆ. ಊರಿನ ಮೇಲ್ವರ್ಗದ ಹುಡುಗರು ಮೆರವಣಿಗೆಯ ಮೂಲಕ ಹಾಡುತ್ತಾ, ಕುಣಿಯುತ್ತಾ ದೇವಾಲಯದ ಮುಂದೆ 'ಹೌದ್' ಎಂಬ ಬಣ್ಣದ ನೀರಿನಿಂದ ತುಂಬಿದ ಜಾಗದ ಮುಂದೆ ನಿಲ್ಲುತ್ತಾರೆ. ಅಲ್ಲಿಂದ ದಲಿತರ ಕೇರಿಗಳಿಂದ ಹರೆಯದ ದೇವದಾಸಿಯರು ಬಂದು ಇವರ ಎದುರು ನಿಲ್ಲುತ್ತಾರೆ. ದೇವದಾಸಿಯರಿಗೆ ಸೀರೆ ಕುಪ್ಪಸವನ್ನು ನೀಡಲಾಗುತ್ತದೆ. ಎಲ್ಲರ ಸಮ್ಮುಖದಲ್ಲಿಯೇ ಅವುಗಳನ್ನು ಧರಿಸಿಕೊಂಡು, ಆ ಹುಡುಗರು ಬಣ್ಣವನ್ನು ಎರಚುತ್ತಾ, ಓಕುಳಿ ಆಡುತ್ತಾ ಅವರ ಅಂಗಾಂಗಗಳನ್ನು ಸ್ಪರ್ಶಿಸಿದರೂ ದೇವದಾಸಿಯರು ವಿರೋಧಿಸುವಂತಿಲ್ಲ. ಅಲ್ಲದೆ ನೆರೆದ ಜನರೂ ಸಹ ವಿರೋಧ ವ್ಯಕ್ತಪಡಿಸುವಂತಿಲ್ಲ. ಇತ್ತೀಚೆಗೆ ಅಂದರೆ 1985ರ ವರೆಗೆ ಈ ಅಶ್ಲೀಲ ಪದ್ಧತಿ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಈ ಓಕುಳಿ ಆಟಕ್ಕೆ ದಲಿತ

ಹರೆಯದ ದೇವದಾಸಿಯರಲ್ಲದೆ, ಹರೆಯದ ಹೆಣ್ಣು ಮಕ್ಕಳನ್ನು ಬಳಸಿಕೊಳ್ಳುತ್ತಾರೆ. ದಾರಿದ್ರ್ಯ ಮತ್ತು ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವ ದಲಿತ ದೇವದಾಸಿಯರು ಈ ಆಟದಲ್ಲಿ ಭಾಗವಹಿಸುತ್ತಾರೆ. ಊರಿಗೆ ಯಾವುದೇ ರೀತಿ ತೊಂದರೆಯಾಗುವುದಿಲ್ಲ. ಬರಗಾಲ, ಕ್ಷಾಮ ಉಂಟಾಗುವುದಿಲ್ಲ. ಸುಖ–ಶಾಂತಿ ನೆಲೆಸಿರುತ್ತದೆ ಎಂಬ ಕಾರಣಕ್ಕೆ ಈ ಆಟವನ್ನು ಆಡಿಸುವೆವು ಎಂಬುದು ಗ್ರಾಮಸ್ಥರ ನಂಬಿಕೆ. ಏನೇ ನಂಬಿಕೆ, ಸಂಪ್ರದಾಯಗಳಿದ್ದರೂ ಅದಕ್ಕೆ ಮೊದಲು ಬಲಿಯಾಗುವವರು ದಲಿತರು ಎಂದು ಹೇಳಬಹುದು

**ಸಿಡಿಯಾಟ**

ಕರ್ನಾಟಕದಲ್ಲಿ 'ಗ್ರಾಮದೇವತೆ'ಯ ಜಾತ್ರೆಯಲ್ಲಿ ಜರುಗುವ 'ಸಿಡಿ ಆಟ' ಆರಂಭವು ದೇವದಾಸಿಯರಿಂದಲೇ ಹಿಂದೆ ಜರುಗುತ್ತಿತ್ತು. ಈಗ ಬದಲಾಗಿದೆ. ಕಬ್ಬಾಳದಲ್ಲಿ ಕಬ್ಬಾಳಮ್ಮ, ಮಳೆಗಾಲದಲ್ಲಿ ಮಸಣಮ್ಮ, ಹಾಲೇಕಲ್ಲಿನಲ್ಲಿ ಕರಿಯಮ್ಮ, ಘತ್ತರಗಿಯಲ್ಲಿ ಭಾಗಮ್ಮ, ಮಂಡ್ಯ ಜಿಲ್ಲೆಯ ಮಳವಳ್ಳಿ ಪಟ್ಟಣದಲ್ಲಿರುವ ದಂಡಿನ ಮಾರಮ್ಮ ಹಾಗೂ ಹೊಳಗೆರೆ ಹುಚ್ಚಮ್ಮ ಹೀಗೆ ಬೇರೆ ಬೇರೆ ಊರುಗಳಲ್ಲಿ ಬೇರೆ ಬೇರೆ ದೇವರ ಹೆಸರಿನಲ್ಲಿ ದೇವತೆಗಳನ್ನು ಪ್ರಸನ್ನಗೊಳಿಸಲು ಸಿಡಿ ಆಡಿಸುತ್ತಾರೆ. ಸಿಡಿಯ ಉದ್ದ ಭಾಗವನ್ನು ಹಗ್ಗದ ಸಹಾಯದಿಂದ ಕೆಳಗೆ ಎಳೆದು ಸಿಡಿ ಆಡುವ ದೇವದಾಸಿಯ ಸೊಂಟದ ಸುತ್ತ ಮಂದಿರದಲ್ಲಿ ತೀರ್ಥವನ್ನು ಹಾಕಿ ಪೂಜಿಸಿದ ಕೊಕ್ಕೆ ಇರುವ ಕಬ್ಬಿಣದ ಪಟ್ಟಿಯನ್ನು ಕಟ್ಟಲಾಗುತ್ತದೆ. ಕಬ್ಬಿಣದ ಪಟ್ಟಿಗೆ ಇರುವ ಕೊಕ್ಕೆಯನ್ನು ಸಿಡಿಗೆ ಜೋತು ಬಿಟ್ಟು, ಸಿಡಿಯನ್ನು ದೇವದಾಸಿಯ ಎದೆಯ ಭಾಗಕ್ಕೆ ಕಟ್ಟಲಾಗುತ್ತದೆ. ಸಿಡಿ ಕಂಬದ ಸಣ್ಣ ಭಾಗವನ್ನು ಎಳೆದರೆ ದೇವದಾಸಿ ಕಂಬಕ್ಕೆ ಜೋತಾಡುತ್ತಾ ಗಾಳಿಯಲ್ಲಿ ತೇಲುತ್ತಾಳೆ. ಸುಮಾರು 50 ಅಡಿ ಮೇಲಿರುವ ದೇವದಾಸಿ 2ಕೈಗಳನ್ನು ಜೋಡಿಸಿ ನೇತಾಡುತ್ತಿರುತ್ತಾಳೆ. ಅಡ್ಡ ಕಂಬವನ್ನು ಮೂರು ಸುತ್ತು ತಿರುಗಿಸಲಾಗುತ್ತದೆ. ಊರಿನ ಹಿತಕ್ಕಾಗಿ ದೇವದಾಸಿ ಈ ಆಟವನ್ನು ಆಡುತ್ತಾಳೆ. ಆದ್ದರಿಂದ ಆಕೆಯ ಬೆನ್ನಿಗೆ ಯಾವುದೇ ಹಾನಿಯಾಗುವುದಿಲ್ಲ. ಇದೆಲ್ಲ ದೇವರ ಆಟ ಎಂದು ಭಕ್ತರ ತಿಳುವಳಿಕೆಯಾಗಿದೆ. ಆದರೆ ಈಗಲೂ ಸಿಡಿ ಆಟ ಇದ್ದರೂ ಸಹ ದೇವದಾಸಿಯರಾರು ಆಡುವುದಿಲ್ಲ. ಪುರುಷರಿಗಿಂತ ಹೆಚ್ಚು ಮಹಿಳೆಯರಾಡುತ್ತಾರೆ. ಸಿಡಿಯಾಟದ ವಿಧಾನವು ಅಲ್ಪಸ್ವಲ್ಪ ಬದಲಾಗಿದೆ ಎಂದು ಹೇಳಬಹುದು.

**ಮಾಟಮಂತ್ರ**

ಕರ್ನಾಟಕದಲ್ಲಿ ಕಂಡು ಬರುವ ಮೌಢ್ಯಾಚರಣೆಗಳಲ್ಲಿ ಮಾಟ ಮಂತ್ರ ಪ್ರಮುಖವಾದ ಆಚರಣೆಯಾಗಿದೆ. ಮಾಟ ಎಂದರೆ ಮಾಡಿದ ಕೆಲಸ, ಕೈಗೊಂಡ ಕಾರ್ಯ ಅಥವಾ ಕ್ಷುದ್ರದೇವತೆಗಳನ್ನು ಒಲಿಸಿಕೊಂಡು ಮಂತ್ರತಂತ್ರಗಳಿಂದ ಕೇಡನ್ನು ಬಯಸಿ ಮಾಡುವ ಹಿಂಸಾಕಾರ್ಯ ಮತ್ತು ಕೃತ್ರಿಮವಾದ ಕೆಲಸವಾಗಿದೆ. ಅಭಿಚಾರ, ವಶೀಕರಣ, ಭಾನಾಮತಿ ಮೊದಲಾದ ಮಾಂತ್ರಿಕ ವಿದ್ಯೆಗಳು ಇದರೊಂದಿಗೆ ತಳಕು ಹಾಕಿಕೊಂಡಿವೆ. ಹಿಂಸಾಮಾರ್ಗವಾಗಿ ಹುಟ್ಟಿಕೊಂಡ ಈ ತಂತ್ರವಿದ್ಯೆಗಳು ಜನರನ್ನು ಹಿಂಸಿಸುವ ಸಂಪತ್ತನ್ನು ಹಾನಿಗೊಳಿಸುವ ಒಂದು ಕ್ರೂರ ಮಾರ್ಗವೆಂದೇ ಹೇಳಬೇಕು. ಇದು ಬಹು ಹಿಂದಿನಿಂದಲೂ ಗೌಪ್ಯ ಪರಂಪರೆಯಾಗಿಯೇ ಮುಂದುವರೆಸಿಕೊಂಡು ಬರುತ್ತದೆ. ವೇದಗಳ ಕಾಲದಿಂದಲೂ ಮಾಟಮಂತ್ರಗಳ ಅಸ್ತಿತ್ವವು ಕಂಡು ಬರುತ್ತವೆ. ಅಥರ್ವಣ ವೇದವು ಮಂತ್ರ, ತಂತ್ರ, ಮಾಟ, ಮೋಡಿ, ಯಕ್ಷಿಣಿವಿದ್ಯೆ ಇತ್ಯಾದಿಗಳ ಕುರಿತು ತಿಳಿಸುತ್ತದೆ. ಅಥರ್ವಣ ವೇದಕ್ಕೆ ಅಥರ್ವಾಂಗಿರಸ ಎಂಬ ಹೆಸರೂ ಸಹ ಇದೆ. ಅಥರ್ವನ್ ಎಂದರೆ ಶುಕ್ಲೇಂದ್ರಜಾಲ ಎಂದೂ ಅಂಗೀರಸವೆಂದರೆ ಕೃಷ್ಣೇಂದ್ರಜಾಲ ಎಂದು ಅರ್ಥವಿದೆ (ಇವುಗಳನ್ನು ಬಿಳಿಮಾಟ, ಕರಿಮಾಟ ಎಂದು ಕೂಡ ಕರೆಯಲಾಗುತ್ತದೆ.). ಶುಕ್ಲೇಂದ್ರಜಾಲ ಎಂಬುದು ಕಾಯಿಲೆಗಳ ಗುಣಕ್ಕಾಗಿ ಮಾಡುವ ತಂತ್ರವಾಗಿದೆ. ದೀರ್ಘಾಯಸ್ಸು, ಧಾನ್ಯ ಸಮೃದ್ಧಿ, ಆಸ್ತಿ, ಸಂತಾನ,

ಪ್ರಾಪ್ತಿ ಸಂಪತ್ತು ಮುಂತಾದವುಗಳನ್ನು ಗಳಿಸಿಸುವುದಕ್ಕೆ ಕೋರಿ ಉಪಯೋಗಿಸುವ ಮಂತ್ರಗಳನ್ನು ಒಳಗೊಂಡಿದೆ. ಕೃಷ್ಣೇಂದ್ರಜಾಲ ಎಂಬುದು ಶತ್ರುಗಳ ನಾಶಕ್ಕಾಗಿ ಅಗೋಚರ ಶಕ್ತಿಯನ್ನು ಮುಂದಿಟ್ಟುಕೊಂಡು ಪ್ರಯೋಗಿಸುವ ತಂತ್ರ.ವಾಗಿದೆ. ಕೋಳಿ, ಕುರಿ, ಹಂದಿ ಇತ್ಯಾದಿ ಪ್ರಾಣಿಗಳ ಬಲಿ ಇಲ್ಲಿ ಪ್ರಮುಖವಾದವುಗಳಾಗಿವೆ. ಈ ಪ್ರಾಣಿಗಳು ವಿಲವಿಲನೆ ಒದ್ದಾಡಿದರೆ ಶತ್ರುಗಳಿಗೂ ಇದೇ ರೀತಿ ನರಳಿನರಳಿ ಸಾಯುವಂತೆ ಆಗುತ್ತದೆಂಬ ನಂಬಿಕೆಯಿದೆ. ಆದ್ದರಿಂದ ಅಥರ್ವಣ ವೇದವನ್ನು "ಮೌಢ್ಯಗಳ ಜನಕ" ಎಂದಿರುವ ಸಿದ್ದಸ್ವಾಮಿಯವರ ನಿಲುವು ವಿಚಾರ ಯೋಗ್ಯವಾದುದು. ಇಂತಹ ತಂತ್ರಗಾರಿಕೆಯನ್ನೇ ಆಧರಿಸಿ ಮಾಟಗಾರ ಅಥವಾ ಮಾಟಗಾತಿಯರ ವರ್ಗವೇ ಸೃಷ್ಟಿಯಾದುದರಿಂದ ಸಾವಿರಾರು ಜನ ಬಲಿಪಶುಗಳಾಗಿದ್ದಾರೆ ಮತ್ತು ಬಲಿಪಶುಗಳಾಗುತ್ತಿದ್ದಾರೆ.

**ಅಜಂಪುರದ ಸಿಡಿ ಉತ್ಸವ**

ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲೂಕು ಅಜಂಪುರ ಗ್ರಾಮದಲ್ಲಿ ತುಂಬಾ ವರ್ಷಗಳಿಂದ ಗ್ರಾಮದೇವತೆ ಕಿರಾಳಮ್ಮನ 'ಸಿಡಿ' ನಡೆಯುತ್ತಿರುತ್ತದೆ. ಧರ್ಮದ ಹೆಸರಿನಲ್ಲಿ ಹರಿಜನ ಮಹಿಳೆಯರಿಗೆ ಕ್ರೂರ ಹಿಂಸೆ ನೀಡಲಾಗುತ್ತಿತ್ತು. ಹರಿಜನರನ್ನು ದೇವಾಲಯದೊಳಗೆ ಮಾತ್ರಬಿಡದ ಸವರ್ಣೀಯರು ಸಿಡಿ ಆಡಲು ಮಾತ್ರ ದಲಿತರೇ ಬೇಕಾಯಿತು. ದಲಿತರು ದೇವರು, ಧರ್ಮದ ಭಯಕ್ಕೆ ವಿರೋಧಿಸದೆ ಸಿಡಿ ಆಡುತ್ತಿದ್ದರು. ಸಿಡಿ ಆಡುವ ಸ್ತ್ರೀ ಅಥವಾ ಪುರುಷರ ಬೆನ್ನಿನ ಮೇಲೆ 3–4 ಇಂಚಿನ ಉದ್ದದ ಬೆಳ್ಳಿಯ ದಬ್ಬಳದಿಂದ ಚುಚ್ಚಲಾಗುತ್ತದೆ. ನಂತರ 'ಸಿಡಿಗಂಟ'ನ್ನು ಸುಮಾರು 20 ಅಡಿ ಎತ್ತರಕ್ಕೆ ಏಣಿಯಂತಹ ಕಂಬಕ್ಕೆ ಕಟ್ಟಿ ತಿರುಗಿಸುತ್ತಾರೆ ಮತ್ತು ಸ್ವಲ್ಪ ದೂರ ತೇರು ಎಳೆದಂತೆ ಎಳೆಸುತ್ತಾರೆ.

**ಗಾವು ಆಚರಣೆ**

ಈ ಮೌಢ್ಯ ಆಚರಣೆಯು ಕರ್ನಾಟಕದಲ್ಲಿ ರೂಢಿಯಲ್ಲಿರುವುದು ಕಂಡುಬರುತ್ತದೆ. "ದೇವರ ಹೆಸರಿನಲ್ಲಿ ಬಲಿ ನೀಡುವ ಕ್ರಿಯಾ ವಿಧಾನಗಳು ಹಲವು ರೀತಿಯಲ್ಲಿವೆ. ಅದರಲ್ಲಿ ಗಾವು ಸಿಗಿಯುವ ಆಚರಣೆಯೂ ಒಂದು. ಗಾವು ಎಂದರೆ ಗ್ರಾಮದೇವತೆ ಮೊದಲಾದ ದೇವರುಗಳ ಮುಂದೆ ಪೂಜಾರಿಯು ಬಲಿಗಾಗಿ ಕುರಿಯನ್ನು ಹಲ್ಲಿನಿಂದ ಕಚ್ಚಿ ಕೊಲ್ಲುವುದು. ಅಂದರೆ ಹೋತದ ಗಂಟಲನ್ನು ಮನುಷ್ಯನು ಬಾಯಿಯಿಂದಲೇ ಕಚ್ಚಿ ಅದರ ರಕ್ತವನ್ನು, ತುಂಡು ಮಾಂಸವನ್ನು ದೇವತೆಗಳಿಗೆ ಸಮರ್ಪಿಸುವುದು. ಇದನ್ನು ಗಾವು ಕಟ್ಟು, ಗಾವು ಸಿಗಿಯುವುದು ಎಂಬ ಹೆಸರುಗಳಿಂದ ಕರೆಯುವರು. ಕೆಲವೆಡೆ ಕೋಳಿ, ಟಗರು, ಹಂದಿಗಳನ್ನು ಈ ರೀತಿ ಸಿಗಿಯುವುದು ಕಂಡುಬರುತ್ತದೆ. ದೇವತೆಗಳ ಕೋಪವನ್ನು ಶಮನಗೊಳಿಸಲು ಈ ಆಚರಣೆಯನ್ನು ನಡೆಸಲಾಗುವುದು. ಮುಖ್ಯವಾಗಿ ಈ ಆಚರಣೆಯನ್ನು ಮಾರಮ್ಮ ದೇವಿಯ ಹೆಸರಿನಲ್ಲಿ ನಡೆಸಲಾಗುತ್ತದೆ. ಅಲ್ಲದೆ ಎಲ್ಲಮ್ಮ, ಕಾಳಮ್ಮ, ಚೌಡಮ್ಮ, ಬರಗೇರಮ್ಮ, ತಿಪ್ಪಿನಘಟ್ಟಮ್ಮ, ಕೋಲಾರಮ್ಮ, ದುರ್ಗಿ, ಚಾಮುಂಡಿ ಇನ್ನಿತರ ಶಕ್ತಿದೇವತೆಗಳ ಹೆಸರಿನಲ್ಲೂ ನಡೆಯುತ್ತದೆ. ಗಾವು ಸಿಗಿಯುವ ದಿನ ಹೋತವನ್ನು ದೇವಾಲಯದ ಮುಂದಿನ ಗಾವಿನ ಗುಂಡಿಯ ಬಳಿ ಶಾಸ್ತ್ರೋಕ್ತವಾಗಿ ಪೂಜೆ ಮಾಡಿ ಬಲಿ ಕೊಡಲಾಗುತ್ತದೆ. ನಂತರ ಮರಿಯ ತಲೆಯನ್ನು ಕತ್ತರಿಸಿ ಅರಿಶಿನ, ಕುಂಕುಮ ಹಚ್ಚಿ ಆ ಗುಂಡಿಯಲ್ಲಿ ಮುಚ್ಚಲಾಗಿದ್ದು, ಮೇಲ್ಭಾಗದಲ್ಲಿ ಮೊಸರನ್ನ ಎಡೆ ಹಾಕಿ ಶಾಂತಿ ಮಾಡಲಾಗುತ್ತದೆ. ನಂತರ ಗಾವಿನ ರಕ್ತವನ್ನು ಅನ್ನಕ್ಕೆ ಮಿಶ್ರಣ ಮಾಡಿ ನೆರೆದ ಭಕ್ತರಿಗೆ ಕೊಡಲಾಗುವುದು. ಅದನ್ನು ಪ್ರಸಾದವೆಂದು ತಮ್ಮ ಮನೆಯ ಸೂರುಗಳಿಗೆ ಕಟ್ಟುವುದಲ್ಲದೆ ಮಕ್ಕಳ ತಾಯತಕ್ಕೆ ಬಳಸುವರು. ಇದರಿಂದ ರೋಗ ರುಜಿನಗಳು, ಪೀಡೆ ಪಿಶಾಚಿಗಳು ಬರುವುದಿಲ್ಲ ಎಂಬ ನಂಬಿಕೆ ಇರುವುದು ಕಂಡುಬರುತ್ತದೆ.

**ರಥ ಸೇವೆ**

ಇದು ಕರ್ನಾಟಕದ ಕೆಲವು ಸ್ಥಳಗಳಲ್ಲಿ ಇಂದಿಗೂ ಆಚರಣೆಯಲ್ಲಿ ಇರುವುದು ಕಾಣುತ್ತೇವೆ. ಬೆನ್ನಿನ

ಮೂಳೆಗೆ ಕಬ್ಬಿಣದ ಕೊಕ್ಕೆ ಸಿಕ್ಕಿಸಿಕೊಂಡು ರಥವನ್ನು ಎಳೆಯುವುದು. ದೇವರಿಗೆ ಈ ರೀತಿಯ ಸೇವೆ ಸಲ್ಲಿಸುವುದರಿಂದ ಕಷ್ಟ ತೊಂದರೆಗಳು, ಪಾಪಗಳು ಪರಿಹಾರವಾಗುತ್ತದೆ ಎಂಬ ನಂಬಿಕೆಯಿಂದ ಈ ಸೇವೆ ಮಾಡುತ್ತಾರೆ. ಟಿ.ನರಸೀಪುರ ತಾಲೂಕಿನಲ್ಲಿ ಬಣ್ಣಾರಿ ಮಾರಮ್ಮ ದೇವಿಯ ಹಬ್ಬದಂದು ಚಿಕ್ಕ ತೇರನ್ನು ಬೆನ್ನಿಗೆ ಕೊಕ್ಕೆ ಹಾಕಿ ಎಳೆಯುವ ಸೇವೆಯೊಂದಿತ್ತು. ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕು ಗಣೇಶಪುರದಲ್ಲಿ ಬಣ್ಣಾರಿ ಮಾರಮ್ಮ ದೇವಿ ಹಬ್ಬದಂದು ಬೆನ್ನಿಗೆ ಕೊಕ್ಕೆ ಹಾಕಿ ರಥವನ್ನು ಎಳೆಯುವ ಆಚರಣೆ ನಡೆಯುತ್ತದೆ. ಪ್ರಾಣಕ್ಕೆ ಕುಂದುಂಟು ಮಾಡುವ ಇಂತಹ ಆಚರಣೆಗಳನ್ನು ಮನುಷ್ಯ ಸೃಷ್ಟಿಸಿಕೊಂಡಿರುವುದೇ ವಿನಃ ದೇವರಲ್ಲ ಎಂಬುದನ್ನು ಅರಿಯಬೇಕು. ಹೀಗೆ ಹಿಂಸಾಚಾರಕ್ಕೆ ಕಾರಣವಾಗಿರುವ ಆಚರಣೆಗಳು ದೇವರ ಹೆಸರಿನಲ್ಲಿ ಇಂದಿಗೂ ಅಲ್ಲಲ್ಲಿ ಜೀವಂತವಾಗಿದೆ. ಮಾನವನ ಪ್ರಾಣಕ್ಕೆ ಕುಂದುಂಟು ಮಾಡುವ ಆಚರಣೆಗಳನ್ನು ಮಾಡುವುದು, ಆಚರಿಸುವಂತೆ ಒತ್ತಾಯಿಸುವುದು ಇಂದು ನಿಷಿದ್ಧಗೊಂಡಿದೆ.

**ಹಸುಳೆ ಸೇವೆ**

ಈ ಸೇವೆಯು ರಥದ ಮೇಲಿಂದ ಅಥವಾ ದೇಗುಲದ ಮೇಲಿಂದ ಮಕ್ಕಳನ್ನು ಎಸೆಯುವ ಆಚರಣೆ ಇದಾಗಿದೆ. ಹೀಗೆ ಮಾಡುವುದರಿಂದ ಮಗುವಿನ ಭವಿಷ್ಯ ಚೆನ್ನಾಗಿರುತ್ತದೆ ಎಂಬ ನಂಬಿಕೆಯಿಂಧ ಮಾಡುತ್ತಾರೆ. ಇದೊಂದು ಕ್ರೂರಪದ್ಧತಿ. ಮನುಷ್ಯತ್ವವಿಲ್ಲದ ಪ್ರಾಣಿಗಳು ಆಡುವ ಆಟವೆಂದೇ ಹೇಳಬೇಕು. ಚೆಂಡನ್ನು ಎಸೆಯುವ ಹಾಗೆ ಒಂದು ವರ್ಷದ ಮಗುವನ್ನು ಎಸೆಯಲಾಗುವುದು. ಕೆಳಗೆ ಜಮಖಾನ ಅಥವಾ ಕಂಬಳಿಯನ್ನು ಆಧಾರವಾಗಿ ಬಳಸಿದರೂ ಗುರಿ ತಪ್ಪಿದರೆ ಮಗುವಿನ ಜೀವವೇ ಹೋಗುವುದು. ಇಂತಹವುಗಳು ದೇವರ ಹೆಸರಿನಲ್ಲಿ ಇಂದಿಗೂ ಪ್ರಚಲಿತದಲ್ಲಿರುವುದು ವಿಷಾದನೀಯ. ಕರ್ನಾಟಕದ ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ ಮದಬಾವಿ ಗ್ರಾಮದೈವ ಸಿದ್ದೇಶ್ವರನಿಗೆ ಭಕ್ತರು ಸಲ್ಲಿಸುವ ವಿಶೇಷ ಹರಕೆ ಇದಾಗಿದೆ. ಏಪ್ರಿಲ್ ತಿಂಗಳಲ್ಲಿ ನಡೆಯುವ ಜಾತ್ರೆಯಲ್ಲಿ ಎಳೆ ಕಂದಮ್ಮಗಳ ಉಜ್ವಲ ಭವಿಷ್ಯಕ್ಕಾಗಿ, ಪಿಶಾಚಿ ಕಾಟ ಬಾಧಿಸದಿರಲೆಂದು ಮುಂದಿನ ದಿನಗಳಲ್ಲಿ ಯಾವುದೇ ರೋಗರುಜಿನಗಳು ಬಾರದಿರಲೆಂದು ಗುಡಿ ಮೇಲಿಂದ ಎಸೆದು ಈ ಹರಕೆ ತೀರಿಸುತ್ತಾರೆ. ತುಮಕೂರು ಜಿಲ್ಲೆಯಲ್ಲೂ ಮಗುವನ್ನು ತೊಟ್ಟಿಲಿಗೆ ಎಸೆಯುವ ಸೇವೆ ಇಂದಿಗೂ ಕಂಡು ಬರುತ್ತದೆ. ವಿಜಯಪುರ ಜಿಲ್ಲೆ ಇಂಡಿ ತಾಲೂಕು ಶ್ರೀ ಸಂತೇಶ್ವರ ದೇವಾಲಯದಲ್ಲಿ ಆರೋಗ್ಯ, ಭವಿಷ್ಯವೃದ್ಧಿಗಾಗಿ 30 ಅಡಿ ಎತ್ತರದಿಂದ ಎಸೆಯುವ ಆಚರಣೆ ಪ್ರಸ್ತುತವಾಗಿಯೂ ನಡೆಯುತ್ತದೆ.

**ಉಪಸಂಹಾರ**

ಹೀಗೆ ಕರ್ನಾಟಕದ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಮೂಢನಂಬಿಕೆ, ಮೌಢ್ಯ ಆಚರಣೆ, ಅಸಮಾನತೆ, ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಮಡೆಸ್ನಾನ, ಗಾವು ಆಚರಣೆ ಮುಂತಾದ ಮೌಢ್ಯ ಆಚರಣೆಗಳನ್ನು ಕುರಿತು ವಿವರಿಸಲಾಗಿದೆ. ಒಟ್ಟಾರೆ ಮೌಢ್ಯಾಚರಣೆಗಳು ಮಾನವನ ದೈಹಿಕ ಮತ್ತು ಮಾನಸಿಕ ಹಿಂಸಾಚಾರಗಳೇ ಆಗಿವೆ ಎಂಬುದು ತಿಳಿದುಬರುತ್ತದೆ. ಹೀಗಾಗಿ ಮಾನವ ವಿಚಾರ ಶಕ್ತಿಯನ್ನು ಬೆಳೆಸಿಕೊಳ್ಳಬೇಕಿದೆ. ಮೌಢ್ಯ ನಿರ್ಮೂಲನೆಗೆ ಕಾನೂನು ಕಾಯ್ದೆಗಳಿಗಿಂತ ಮಾನವನ ಮನಃಪರಿವರ್ತನೆಯೇ ಮುಖ್ಯ. ಮಾನವನ ಬದುಕಿಗೆ ಆಚರಣೆಗಳು ಮುಖ್ಯ. ಆದರೆ ಮೂಢಾಚಾರಗಳುಬದುಕಿನಅಂತ್ಯಕ್ಕೆ ಕಾರಣವಾಗುತ್ತವೆ ಎಂಬುದು ತಿಳಿದುಬರುತ್ತದೆ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ (ಸಂ.) (2006). ಕನ್ನಡ ವಿಷಯ ವಿಶ್ವಕೋಶ (ಜಾನಪದ), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.

- ಬಸವರಾಜ ಸಿದ್ದಾಶ್ರಮ. (2011). *ಅಂಬಿಗರ ಚೌಡಯ್ಯ ಆರೋಗಿಸಿದಾಗ.* ಶಾಂತ ಪ್ರಕಾಶನ.
- ಹಾಲತಿ ಸೋಮಶೇಖರ್. (2007). *ಮಹಿಳಾ ಚಳವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನಲೆ.* ವಿಸ್ಮಯ ಪ್ರಕಾಶನ.
- *ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಶಿವಮೊಗ್ಗ*, (2017, ಡಿಸೆಂಬರ್ 11)
- ಮುರಿಗೆಪ್ಪ.ಎ (ಪ್ರ.ಸಂ.). (2011). *ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ-1.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಸಿದ್ದಸ್ವಾಮಿ, (2015). *ಮೌಢ್ಯಾಸ್ತ್ರ.* ಗೌತಮ್ ಪ್ರಕಾಶನ.